

ಒಮ್ಮೆ ಪದವಿ ಕಾಲೇಜಿನ ವಿದ್ಯಾರ್ಥಿಗಳ ಜೊತೆಗಿನ ಸಂವಾದದ ವಿಷಯ 'ಮದುವೆಗೆ ಮುನ್ನ... ' ಎಂದಿತ್ತು. ಹದಿಹರೆಯಕ್ಕೂ ಮೊದಲೇ ಪ್ರೀತಿ ಪ್ರೇಮ ಎನ್ನುವ ಭಾವಸ್ಫುರಣೆಯಿಂದ ಹಿಡಿದು ಐವತ್ತು ವರ್ಷಗಳ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಳ್ಳುವವರೆಗೂ ಯುವಕ ಯುವತಿಯರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದರು. ಒಬ್ಬಳು ಯುವತಿ' ನೋಡಿ ಮೇಡಮ್ ಯಾವುದೇ ಮದುವೆ ಮುರಿದು ಬಿದ್ದರೂ ಸಾಮಾನ್ಯವಾಗಿ ಹುಡುಗಿಯದ್ದೇ ತಪ್ಪು ಎನ್ನುವ ಮಾತೇ ಕೇಳಿ ಬರುತ್ತದೆ. ಆದರೆ ವಾಸ್ತವದಲ್ಲಿ ಅದು ಲವ್ ಮ್ಯಾರೇಜ್ ಇರಲಿ ಅಥವಾ ಅರೇಂಜ್ಡ್ ಮದುವೆಯೇ ಆಗಿರಲಿ ಆ ಹುಡುಗ ಹುಡುಗಿಯ ಮಧ್ಯೆ ಏನು ನಡೆದಿರುತ್ತದೆ ಎನ್ನುವುದು ಅವರಿಬ್ಬರಿಗೆ ಮಾತ್ರ ಗೊತ್ತಿರುತ್ತದೆ. ಸ್ವಭಾವದಲ್ಲಿ ಏನಾದರೂ ಹೆಚ್ಚು ಕಡಿಮೆ ಇದ್ದರೆ ಈಗೆಲ್ಲಾ ಆಪ್ತಸಮಾಲೋಚನೆ ಪಡೆಯುವ ಅನುಕೂಲ ಇದೆ ಹಾಗಾಗಿ ಸರಿಪಡಿಸಿಕೊಳ್ಳಬಹುದು. ಆದರೆ ದೈಹಿಕ ಹೊಂದಾಣಿಕೆ (Compatibility) ಇಲ್ಲದಿದ್ದರೆ ಯಾರಿಗೂ ಹೇಳಿಕೊಳ್ಳಲೂ ಆಗುವುದಿಲ್ಲ ಹಾಗಂತ ಜೀವನ ಪೂರ್ತಿ ಅನುಭವಿಸಲೂ ಆಗಲ್ಲ. ಅದಕ್ಕೆ ಮದುವೆಗೆ ಮುನ್ನ ಲಿವಿನ್ ರಿಲೇಷನ್‌ಶಿಪ್‌ನಲ್ಲಿ ಇದ್ದು ನಂತರ ಮದುವೆ ಆಗುವುದೇ ಒಳ್ಳೆಯದು' ಎಂದಳು.



ಆಕೆಯ ಮಾತುಗಳನ್ನು ಕೇಳಿದಾರಭ್ಯ ಈ ಸಂಬಂಧವನ್ನು ಹೊಸದೊಂದು ಆಯಾಮದಿಂದ ಅರ್ಥೈಸಿಕೊಳ್ಳುವ ಅವಕಾಶ ಸಿಕ್ಕಿತು. ಮದುವೆ ಜೀವನದ ಅಂತಿಮ ಗುರಿ ಎನ್ನುವ ಮನೋಭಾವದಿಂದ ಸಮಾಜವು ಅದೊಂದು ಆಯ್ಕೆ ಎನ್ನುವಲ್ಲಿಗೆ ಹೊರಳಿ, ಒಂಟಿಯಾಗಿ ಇರುವುದು ಕಷ್ಟವೇನಲ್ಲ ಎನ್ನುವಲ್ಲಿಂದ ಲಿವಿನ್ ರಿಲೇಷನ್‌ಶಿಪ್ ಎನ್ನುವ ಜೊತೆಗಾರಿಕೆಯವರೆಗೂ ನಡೆದುಬಂದಿದೆ. ಒಂದು ಕಾಲಘಟ್ಟದಲ್ಲಿ ಮಗುವನ್ನು ಹೆರಲು ಮದುವೆ ಕಡ್ಡಾಯ ರಹದಾರಿಯಂತಿತ್ತು. ಆದರೀಗ ಗಂಡು ಹೆಣ್ಣು ಇಬ್ಬರ ದೇಹದಲ್ಲೂ ಕಿಂಚಿತ್ ಮಾರ್ಪಾಡು ಮಾಡಿಕೊಳ್ಳದೆ ತಮ್ಮದೇ ಮಗು ಪಡೆಯುವ ಎಲ್ಲಾ ಸವಲತ್ತುಗಳು ಕೈಯಳತೆಯಲ್ಲಿ ಲಭ್ಯವಿದೆ. ಒಂದು ಹೆಣ್ಣಿಗೊಂದು ಗಂಡು ಹೇಗೋ ಸೇರಿ ಹೊಂದಿಕೊಂಡು ಮದುವೆಯನ್ನು ಸರಿದೂಗಿಸಲೇಬೇಕು ಎನ್ನುವ ಅನಿವಾರ್ಯ ಮರೆಯಾಗಿದೆ. ಮದುವೆ ಆಗದೆಯೇ ಮಗು ಪಡೆಯುವುದು ಸಾಧ್ಯವಾದರೆ ಮದುವೆಯಾಗದೆಯೇ ಒಪ್ಪಿತವಾದ ಎರಡು ಜೀವಗಳು ಜೊತೆಯಲ್ಲಿ ಇರಲು ಏನು ತಾನೆ ಅಡ್ಡಿ ಎನ್ನುವ ಪ್ರಶ್ನೆ ಪ್ರತಿ ಮನೆಯಲ್ಲೂ ಮೌನದಲ್ಲಿಯಾದರೂ ಮಾರ್ದನಿಸುತ್ತಿದೆ.

ಜನರ ಈ ಕೂಗಿಗೆ ಸ್ಪಂದಿಸುವುದಕ್ಕೆ ಕಾನೂನುಗಳೂ ಮುಂದೆ ಬಂದಿವೆ. ಸರ್ವೋಚ್ಚ ನ್ಯಾಯಾಲಯವು ತನ್ನ ಹಲವಾರು ತೀರ್ಪುಗಳಲ್ಲಿ ಲಿವಿನ್ ರಿಲೇಷನ್‌ಶಿಪ್ ಎನ್ನುವುದು ಮದುವೆಯಲ್ಲಿಯೇ ಕೊನೆಗಾಣಬೇಕು ಎಂದಾಗಲಿ ಮತ್ತು ಹಾಗೆ ಒಟ್ಟಿಗೆ ವಾಸಿಸುವವರು ಗಂಡು ಮತ್ತು ಹೆಣ್ಣು ಮಾತ್ರ ಆಗಿರಬೇಕು ಎಂದಾಗಲಿ ಇಲ್ಲ ಎಂದಿದೆ. ಮದುವೆಯಿಲ್ಲದೆ ಗಂಡು ಹೆಣ್ಣುಗಳು ಪರಸ್ಪರ ಒಪ್ಪಿಗೆಯಿಂದ ಒಟ್ಟಾಗಿ ಜೀವನ ನಡೆಸುವುದಕ್ಕೆ ಶತಮಾನಗಳ ಇತಿಹಾಸವಿದೆ. ಆದರೆ ಒಂದಷ್ಟು ದಶಕಗಳಿಂದ ಅವುಗಳನ್ನು ಸಾರ್ವಜನಿಕವಾಗಿ ತೋರಿಸಿಕೊಳ್ಳಲು ಜನರು ಧೈರ್ಯ ಮಾಡುತ್ತಿದ್ದಾರೆ. **Latha Singh Vs. State of UP (2006)** ಈ ಪ್ರಕರಣದಲ್ಲಿ ಮದುವೆಯಿಲ್ಲದೆ ಒಟ್ಟಿಗೆ ಬದುಕಲು ತೀರ್ಮಾನಿಸಿದ್ದ ಇಬ್ಬರು ವಯಸ್ಕರಿಗೆ ಅವರ ಕುಟುಂಬದಿಂದ ವಿರೋಧ ಎದುರಾದಾಗ ಸರ್ವೋಚ್ಚ ನ್ಯಾಯಾಲಯವು ಇಬ್ಬರು ವಯಸ್ಕ ವ್ಯಕ್ತಿಗಳ ನಡುವೆ ಒಪ್ಪಿಗೆ ಇದ್ದಲ್ಲಿ ಅವರು ಒಟ್ಟಿಗೆ ವಾಸಿಸಲು, ದಾಂಪತ್ಯದಂತೆ ಜೀವನ ನಡೆಸಲು ಕಾನೂನಿನ ಅಡ್ಡಿಯಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಿದೆ. ನಮ್ಮ ಸಂವಿಧಾನದ ಪರಿಚ್ಛೇದ 21ರ ಮಾರ್ಗದರ್ಶನದಂತೆ ತಮ್ಮ ಜೀವನ ಸಂಗಾತಿಯನ್ನು ಆಯ್ದುಕೊಳ್ಳುವುದು ಪ್ರತೀ ವಯಸ್ಕನ ಮೂಲಭೂತ ಹಕ್ಕು ಎನ್ನುವುದನ್ನು **Shafin Jahan Vs. Asokan K M** ಎನ್ನುವ ಪ್ರಕರಣದಲ್ಲಿನ ತೀರ್ಪು ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಸಮಾಜ ನಂಬಿರುವ ನೈತಿಕತೆಯ ವ್ಯಾಖ್ಯಾನ ಏನೇ